

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಬುದ್ಧಿ ಮತ್ತು ಹೃದಯ

**ಮೂ**ವರು ಸಾಹಸಿಗರು - ತಂದೆ, ಮಗಳು ಮತ್ತು ಅಳಿಯ, ಒಬ್ಬರ ಹಿಂದೊಬ್ಬರು ಒಟ್ಟಿಗೆ ಹಿಮಾಲಯ ಪರ್ವತಾರೋಹಣ ಮಾಡುತ್ತಿದ್ದರು. ಮೂವರೂ ಸೊಂಟಕ್ಕೆ ಒಂದೇ ಹಗ್ಗವನ್ನು ಬಿಗಿದು ಕಟ್ಟಿಕೊಂಡಿದ್ದರು. ಮೇಲಿನ ತುದಿಯಲ್ಲಿ ಮಗಳು ಇದ್ದಳು, ಮಧ್ಯೆ ಅವಳ ಗಂಡ ಇದ್ದ, ಕೆಳತುದಿಯಲ್ಲಿ ಅವಳ ತಂದೆ. ಹಗ್ಗದ ಮೇಲಿನ ತುದಿಯಲ್ಲಿದ್ದ ಮಗಳು ಹಿಮಪರ್ವತದ ಶಿಖರಕ್ಕೆ ತನ್ನ ಕೈಯಲ್ಲಿನ ಕೊಕ್ಕೆಯನ್ನು ಎಸೆದು ಸಿಕ್ಕಿಸಿ ಅದರ ಆಧಾರದಿಂದ ಮೇಲೆ ಹತ್ತಲು ಯತ್ನಿಸುತ್ತಿದ್ದಳು. ಅಷ್ಟರಲ್ಲಿ ಭೀಕರವಾದ ಹಿಮಪಾತ ಉಂಟಾಗಿ ಗಿರಿಶಿಖರದ ಹಿಮಗಡ್ಡೆ ಇಬ್ಭಾಗವಾಗಿ ಸೀಳಿಬಿಟ್ಟಿತು. ಅವರು ಆಯ ತಪ್ಪಿ ಬಿದ್ದು ಹಗ್ಗದ ಆಸರೆಯಿಂದ ನೇತಾಡತೊಡಗಿದರು. ಕೆಳಗೆ ನೋಡಿದರೆ ಸಾವಿರಾರು ಅಡಿ ಆಳದ ಭೀಕರ ಪ್ರಪಾತ ! ಮೇಲಿರುವ ಕೊಕ್ಕೆಗೆ ಮೂವರ ಭಾರವನ್ನು ತಾಳುವ ಕ್ಷಮತೆಯಿಲ್ಲ. ಮೂರೂ ಜನರನ್ನು ರಕ್ಷಿಸಲು ಅದಕ್ಕೆ ಶಕ್ತಿ ಸಾಲದು. ಇಬ್ಬರನ್ನು ಮಾತ್ರ ಹಿಡಿದಿಟ್ಟುಕೊಳ್ಳಲು ಅದಕ್ಕೆ ಸಾಧ್ಯವಿತ್ತು. ಪರ್ವತಾರೋಹಣದ ಬಗ್ಗೆ ಸಾಕಷ್ಟು ಅನುಭವವುಳ್ಳ ಮೂವರೂ ಪ್ರಾಣಾಪಾಯದ ಅರಿವಿನಿಂದ ಘಾಸಿಗೊಂಡರು. ಕೆಳತುದಿಯಲ್ಲಿದ್ದ ತಂದೆ ಸಾವರಿಸಿಕೊಂಡು ಧೃತಿಗೆಡದೆ ವಾಸ್ತವತೆಯನ್ನು ಮನಗಂಡು ಮೇಲಿರುವ ತನ್ನ ಅಳಿಯನಿಗೆ ಕೂಗಿ ಹೇಳಿದನು: "ಎಲ್ಲರೂ ಉಳಿಯಬೇಕೆಂದು ಯತ್ನಿಸಹೋದರೆ ಮೂವರೂ ಸಾಯುತ್ತೇವೆ. ಹಗ್ಗದ ಕೆಳತುದಿಯಲ್ಲಿರುವ ನಾನಂತೂ ಬದುಕಿ ಉಳಿಯುವ ಸಾಧ್ಯತೆಯೇ ಇಲ್ಲ. ಮೇಲಾಗಿ ನನಗೆ ವಯಸ್ಸಾಗಿದೆ. ಇನ್ನೆಷ್ಟು ಕಾಲ ಬದುಕಿಯೇನು? ನಾನು ಸಾಯಲು ಸಿದ್ಧ. ನೀನು ನಿನ್ನ ಕಾಲಬುಡದಲ್ಲಿರುವ ಹಗ್ಗವನ್ನು ಕತ್ತರಿಸಿಬಿಡು. ನಾನು ಸತ್ತರೂ ಚಿಂತೆ ಇಲ್ಲ. ನನ್ನ ಕಾರಣದಿಂದ ನೀವಿಬ್ಬರೂ ಸಾಯುವುದು ಬೇಡ. ನಿಮಗೆ ಇನ್ನೂ ವಯಸ್ಸಿದೆ, ಬದುಕಿ ಬಾಳಬೇಕಾದ ಯುವದಂಪತಿಗಳಾದ ನೀವು ಪಾರಾದರೆ ಸಾಕು!" ಅಷ್ಟರಲ್ಲಿ ಹಗ್ಗದ ಮೇಲಿನ ತುದಿಯಲ್ಲಿದ್ದ ಮಗಳು ತಂದೆಯ ಮಾತುಗಳನ್ನು ಕೇಳಿ ಗದ್ಗದಿತಳಾಗಿ ಕೆಳಗಿರುವ ಗಂಡನಿಗೆ ಕೂಗಿ ಹೇಳಿದಳು: "ಬೇಡ, ಬೇಡ, ಹಗ್ಗ ಕತ್ತರಿಸಬೇಡ; ಸಾಯುವುದೇ ಆದರೆ ಎಲ್ಲರೂ ಒಟ್ಟಿಗೇ ಸಾಯೋಣ, ಅಪ್ಪನನ್ನು ಬಲಿಗೊಟ್ಟು ನಾವಿಬ್ಬರು ಬದುಕುವುದು ಬೇಡ!" ಅಳಿಯ ದ್ವಂದ್ವಕ್ಕೆ ಸಿಲುಕಿದನು. ಹಗ್ಗ ಕತ್ತರಿಸಲು ಕೆಳಗಿನಿಂದ ಮಾವ ಏರುಧ್ವನಿಯಲ್ಲಿ ಆಗ್ರಹಪಡಿಸಿದಾಗ ಆತನ ಕೈಯಲ್ಲಿದ್ದ ಚಾಕು ಹಗ್ಗದ ಸನಿಹಕ್ಕೆ ಸರಿಯುತ್ತಿತ್ತು; ಕೈ ನಡುಗುತ್ತಿತ್ತು. ಮೇಲಿನಿಂದ ಹೆಂಡತಿ ಹಗ್ಗ ಕತ್ತರಿಸುವುದು ಬೇಡವೆಂದು ಗೋಳಿಡುತ್ತಾ ಕೂಗಿ ಹೇಳುವಾಗ ಆತನ ಕೈಯಲ್ಲಿದ್ದ ಚಾಕು ಹಗ್ಗದಿಂದ ಹಿಂದಕ್ಕೆ ಸರಿಯುತ್ತಿತ್ತು. ಅವನು ಯಾರ ಮಾತನ್ನು ಕೇಳಬೇಕು? ಕೆಳಗಿನಿಂದ ಒತ್ತಾಯಪಡಿಸುವ ಮಾವನ ಬುದ್ಧಿವಾದದ ಮಾತನ್ನು ಕೇಳಿ ಹಗ್ಗವನ್ನು ಕತ್ತರಿಸಿ ತಾನು ಹಾಗೂ ತನ್ನ ಹೆಂಡತಿ ಬದುಕಿ ಉಳಿಯುವ ಪ್ರಯತ್ನ ಮಾಡಬೇಕೆ? ಅಥವಾ ಮೇಲಿನಿಂದ ಗೋಳಿಡುವ ತನ್ನ ಹೆಂಡತಿಯ ಭಾವುಕತೆಯ ಮಾತನ್ನು ಕೇಳಿ ಹಗ್ಗವನ್ನು ಕತ್ತರಿಸದೆ ಸುಮ್ಮನಿದ್ದು ಹೆಂಡತಿ ಮತ್ತು ಮಾವನೊಂದಿಗೆ ತಾನೂ ಪ್ರಪಾತದಲ್ಲಿ ಬಿದ್ದು ಸಾಯಬೇಕೆ? ಇದರಲ್ಲಿ ಯಾವುದು ಸರಿ, ಯಾವುದು ತಪ್ಪು? ಹೃದಯದ ಬಡಿತ ಏರುತ್ತದೆ. ತೀರ್ಮಾನ ತೆಗೆದುಕೊಳ್ಳಲು ಹೆಚ್ಚಿನ ವೇಳೆ ಇಲ್ಲ, ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೇ ಸಾವಿನ ಗಂಟೆ ಬಾರಿಸಲಿದೆ....! ನೀವು ಈ ಗಂಡಾಂತರದಲ್ಲಿ ಸಿಕ್ಕಿಕೊಂಡಿದ್ದರೆ ಏನು ಮಾಡುತ್ತಿದ್ದಿರಿ ಕ್ಷಣಕಾಲ ಸ್ವತಂತ್ರವಾಗಿ ಚಿಂತಿಸಿ ನಂತರ ಮುಂದೆ ಓದಿ.

ಇಲ್ಲಿ ಮೂವರ ನಿಲುವುಗಳನ್ನು ವಿಚಾರಕ್ಕೆ ಒಡ್ಡೋಣ. ತಂದೆಯು ಅಳಿಯನಿಗೆ ಅವನ ಕಾಲುಬುಡದ ಹಗ್ಗವನ್ನು ಕತ್ತರಿಸಲು ಕೂಗಿ ಹೇಳುವ ಸಂದರ್ಭವನ್ನು ತೆಗೆದುಕೊಂಡರೆ: ತಂದೆಯ ಮನಸ್ಸಿನಲ್ಲಿ ಉಂಟಾದ ಹೃದಯ ಮತ್ತು ಬುದ್ಧಿಯ ಸಂಘರ್ಷದಲ್ಲಿ ಸುಬುದ್ಧಿಯಿಂದ ಹುಟ್ಟಿದ ವಿಚಾರವು ಮೇಲುಗೈ ಸಾಧಿಸಿರುವುದನ್ನು ನೋಡಬಹುದು. ಈ ತೀರ್ಮಾನಕ್ಕೆ ಅವನು ಬರಲು ಹೃದಯದ ಭಾವನೆಗಳನ್ನು ಹತ್ತಿಕ್ಕಿ ಬದುಕಿನ ವಾಸ್ತವತೆಯನ್ನು ಮನಗಂಡ ಕಾರಣವಿರಬಹುದು ಅಥವಾ ಮಗಳ ಮೇಲಿನ ಮಧುರ ಭಾವನೆಗಳಿಂದ ಪ್ರೇರೇಪಿತನಾಗಿ ಸಮಯಪ್ರಜ್ಞೆಯಿಂದ ಕೈಗೊಂಡ ನಿಸ್ವಾರ್ಥಪರತೆಯ ನಿಲುವು ಕಾರಣವಾಗಿರಬಹುದು. ಮಗಳು ಮತ್ತು ಅಳಿಯ ಉಳಿಯಲಿ ಎಂಬ ಕಾಳಜಿಯಿಂದ ಆತನಿಗೆ ತನ್ನ ಸಾವು ಗೌಣವಾಗುತ್ತದೆ. ಭಾವನೆಯ ತುಡಿತದಲ್ಲಿ ಬುದ್ಧಿ ಹೆಚ್ಚು ಪ್ರಬಲವಾಗುತ್ತದೆ; ವಿಚಾರ ಮೇಲುಗೈ ಸಾಧಿಸುತ್ತದೆ. ಹಗ್ಗ ಕತ್ತರಿಸದಿದ್ದರೆ ಮೂವರೂ ಸಾಯುವುದಂತೂ ಖಚಿತ, ತಾನಂತೂ ಸಾಯದಂತೆ ಉಳಿಯಲು ಸಾಧ್ಯವಿಲ್ಲ. ಹೇಗೂ ಸಾಯಲೇಬೇಕು. ಅದರ ಬದಲು ತಾನೊಬ್ಬ ಸತ್ತು, ತನ್ನ ಮಗಳು ಅಳಿಯ ಇಬ್ಬರಾದರೂ ಬದುಕಿ ಉಳಿಯಲಿ ಎಂಬುದು ತಂದೆಯ ವಿವೇಕಯುತ ನಿಲುವು. ಈ ವಿವೇಕದ ಹಿಂದೆ ಹೃದಯದ ಭಾವನೆಗಳೇನೋ ಇವೆ, ಅವು ಬುದ್ಧಿಯನ್ನು ಪ್ರೇರೇಪಿಸುತ್ತವೆ. ಆದರೆ ತಂದೆಯ ಈ ತೀರ್ಮಾನವು ಮೇಲು ನೋಟಕ್ಕೆ ಹೃದಯದ ಮೇಲುಗೈನಿಂದ ಪ್ರೇರೇಪಿತವಾದದ್ದು ಎನಿಸಿದರೂ ವಾಸ್ತವವಾಗಿ ಅದು ಬುದ್ಧಿಯ ಮೇಲುಗೈನಿಂದ ಪ್ರೇರೇಪಿತವಾದದ್ದಾಗಿದೆ.

ಇನ್ನು ಮಗಳ ವಿಚಾರಕ್ಕೆ ಬಂದರೆ ಮೇಲುಗೈ ಸಾಧಿಸುವುದು ಆಕೆಯ ಬುದ್ಧಿಯಲ್ಲ; ಅವಳ ಹೃದಯ. ಅವಳು ತನ್ನ ಗಂಡನಿಗೆ ಹಗ್ಗವನ್ನು ಕತ್ತರಿಸಬೇಡ ಎಂದು ಗದ್ಗದಿತ ಕಂಠದಿಂದ ಹೇಳುತ್ತಾಳೆ. ಅದು ಅವಳ ಹೃದಯದ ಕ್ರಿಯೆ, ಬುದ್ಧಿಯ ಕ್ರಿಯೆ ಖಂಡಿತಾ ಅಲ್ಲ. ಇಲ್ಲಿ ಹೃದಯದ ಭಾವನೆಗಳು ಮೇಲುಗೈ ಸಾಧಿಸುತ್ತವೆ. ಹಗ್ಗ ಕತ್ತರಿಸದಿದ್ದರೆ ಮೂರೂ ಜನ ಸಾಯುತ್ತೇವೆ, ತಂದೆಯನ್ನು ತಾನು ಮತ್ತು ಗಂಡ ಸತ್ತಾದರೂ ಉಳಿಸಲು ಸಾಧ್ಯವೇ ಇಲ್ಲ. ಹಾಗಿದ್ದಾಗ

ತಂದೆ ಹಗ್ಗ ಕತ್ತರಿಸು ಎಂದು ಹೇಳುವುದರಲ್ಲಿ ತಪ್ಪೇನಿದೆ ಎಂದು ಅವಳು ತಾರ್ಕಿಕವಾಗಿ ಆಲೋಚಿಸುವುದಿಲ್ಲ. ತಾರ್ಕಿಕ ಬುದ್ಧಿ, ಹೃದಯದ ಮುಂದೆ ಸೋತು ಮಂಡಿಯೂರುತ್ತದೆ.

ತಂದೆ ಮತ್ತು ಮಗಳು ಈ ಇಬ್ಬರಲ್ಲಿ ಯಾರು ಸರಿ ಅಥವಾ ಯಾರು ತಪ್ಪು ಎಂದು ತೀರ್ಪು ನೀಡಲು ನೀವು 'ನ್ಯಾಯಾಧೀಶ'ನ ಕೆಲಸ ಮಾಡಲು ಹೊರಟರೆ ಖಂಡಿತಾ ಗೊಂದಲದಲ್ಲಿ ಸಿಕ್ಕಿ ಬೀಳುತ್ತೀರಿ. ಇಲ್ಲಿ ಯಾರು ಸರಿ, ಯಾರು ತಪ್ಪು ಎಂದು ನಿಖರವಾಗಿ ಹೇಳುವುದು ಕಷ್ಟ. ಅವರವರ ಆಲೋಚನಾ ವಿಧಾನದಲ್ಲಿ ಅವರವರ ಸಂಸ್ಕಾರಕ್ಕೆ ಅನುಗುಣವಾಗಿ ಇಬ್ಬರೂ ಸರಿ. ಅವರು ಇರುವ ಪರಿಸ್ಥಿತಿಯಲ್ಲಿ ಅವರ ಬುದ್ಧಿ ಮೇಲುಗೈ ಸಾಧಿಸುತ್ತದೆಯೋ ಅಥವಾ ಹೃದಯ ಮೇಲುಗೈ ಸಾಧಿಸುತ್ತದೆಯೋ ಎಂಬುದನ್ನು ಅವಲಂಬಿಸಿ ಅವರು ನಡೆದುಕೊಳ್ಳುತ್ತಾರೆ. ಇದು ಸರಿ, ಅದು ತಪ್ಪು ಎಂದು ವಿಶ್ಲೇಷಣೆ ಮಾಡುವ ನ್ಯಾಯಾಧೀಶನ ತೀರ್ಮಾನವೂ ಸಹ ಆತ ಬುದ್ಧಿಯಲ್ಲಿ ಪ್ರಬಲನೋ ಅಥವಾ ಹೃದಯದಲ್ಲಿ ಶ್ರೀಮಂತನೋ ಎಂಬ ಅಂಶಗಳನ್ನು ಅವಲಂಬಿಸಿರುತ್ತದೆ. ಆ ನ್ಯಾಯಾಧೀಶ ಬುದ್ಧಿಯಲ್ಲಿ ಪ್ರಬಲನಾಗಿದ್ದರೆ ಬುದ್ಧಿಯ ನೆಲೆಯಲ್ಲಿ ನಿಂತು ತಂದೆಯು ತೆಗೆದುಕೊಂಡ ತೀರ್ಮಾನವೇ ಸರಿ; ಅಳಿಯನು ಒಂದು ಸೆಕೆಂಡೂ ತಡಮಾಡದಂತೆ ಹಗ್ಗವನ್ನು ಕತ್ತರಿಸಬೇಕು, ಅದೇ ಆಪದ್ಧರ್ಮ ಎಂದು ಪರಿಗಣಿಸುತ್ತಾನೆ. ಅದೇ ನ್ಯಾಯಾಧೀಶ ಹೃದಯ ಶ್ರೀಮಂತನಾಗಿದ್ದರೆ ಇದಕ್ಕೆ ತದ್ವಿರುದ್ಧವಾದ ನಿಲುವನ್ನು ತಾಳಿ ಮಗಳ ಭಾವನೆಯನ್ನು ಸಮರ್ಥಿಸುತ್ತಾನೆ. ಬುದ್ಧಿಜೀವಿಗಳು ತಂದೆಯ ಪರ ನಿಂತರೆ, ಭಾವುಕರು ಮಗಳ ಪರ ನಿಲ್ಲುತ್ತಾರೆ.

ಇನ್ನು ಈ ಘಟನೆಯ ಹೊರಗೆ ನಿಂತು ತಂದೆ-ಮಗಳು-ಅಳಿಯನ ವರ್ತನೆಗಳನ್ನು ವಿಶ್ಲೇಷಿಸುವುದೇ ಬೇರೆ, ಘಟನೆಯ ಒಳಗೆ ನಿಂತು ಆ ಮೂವರ ಪೈಕಿ ಒಬ್ಬರಾಗಿ ವಿಶ್ಲೇಷಿಸುವುದೇ ಬೇರೆ. ಒಂದೆರಡು ವರ್ಷಗಳ ಹಿಂದೆ ಅಂತರರಾಷ್ಟ್ರೀಯ ಖ್ಯಾತಿಯ ಸಮಾಜಶಾಸ್ತ್ರಜ್ಞ ದಿವಂಗತ ಡಾ॥ ಹಿರೇಮಲ್ಲೂರ ಈಶ್ವರನ್ ಅವರ ಧರ್ಮಪತ್ನಿ ಶ್ರೀಮತಿ ಶೈಲಜಾ ಈಶ್ವರನ್ ಕೆನಡಾದಿಂದ ಸಿರಿಗೆರೆಗೆ ಬಂದಿದ್ದರು. ಅವರು ನಮ್ಮ ಮಠಕ್ಕೆ ಬರಲು ಒಂದು ಭಾವನಾತ್ಮಕ ಕಾರಣವಿತ್ತು. ಮೂಲತಃ ಇವರು ಹಾಲೆಂಡ್ ದೇಶದವರು. ಇವರ ಪತಿ ಹಿರೇಮಲ್ಲೂರ ಈಶ್ವರನ್‌ರವರು ವಿದೇಶ ವ್ಯಾಸಂಗಕ್ಕೆಂದು ನಮ್ಮ ಲಿಂಗೈಕ್ಯ ಗುರುವರ್ಯರಿಂದ ಆರ್ಥಿಕ ನೆರವನ್ನು ಪಡೆದು ಉಪಕೃತರಾದವರು. ಅವರು ವಿದೇಶದಲ್ಲಿ ಪ್ರೀತಿಸಿದ ಇವರನ್ನು ಸಿರಿಗೆರೆಯ ಮಠಕ್ಕೆ ಕರೆದುಕೊಂಡು ಬಂದು ಗುರುವರ್ಯರ ಸಮ್ಮುಖದಲ್ಲಿಯೇ ಮದುವೆಯಾದವರು. ಕ್ರೈಸ್ತ ಧರ್ಮೀಯರಾದ ಇವರ ಜನ್ಮನಾಮ ವೋಬಿನ್ ಸಿಟ್ಟರ್ (Wobin Sitter). ಮಠದಲ್ಲಿ ಮದುವೆ ನಡೆದ ಸಂದರ್ಭದಲ್ಲಿ ಇವರಿಗೆ ಶೈಲಜಾ ಎಂದು ನಮ್ಮ ಪೂಜ್ಯ ಗುರುವರ್ಯರೇ ಪುನರ್‌ನಾಮಕರಣ ಮಾಡಿದರು.

ನಮ್ಮೊಂದಿಗೆ ಶ್ರೀಮತಿ ಶೈಲಜಾರವರು ಕೆಲವೊಂದು ತಾತ್ವಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವಾಗ ಮೇಲೆ ಉದಾಹರಿಸಿದ ಪರ್ವತಾರೋಹಣದ ಘಟನೆಯನ್ನು ಚರ್ಚಿಸುವ ಪ್ರಸಂಗ ಒದಗಿಬಂತು. ಇದಕ್ಕೆ ಶ್ರೀಮತಿ ಶೈಲಜಾರವರು ಥಟ್ಟನೆ ಹೀಗೆ ಪ್ರತಿಕ್ರಿಯಿಸಿದರು: "If I were that daughter, I would have preferred to die!" (ನಾನು ಆ ಮಗಳಾಗಿದ್ದರೆ ಸಾಯಲು ಇಷ್ಟಪಡುತ್ತಿದ್ದೆ!). "ನೀವು ಅಂಥ ತೀರ್ಮಾನಕ್ಕೆ ಏಕೆ ಬರುತ್ತಿದ್ದಿರಿ?" ಎಂದು ಮರು ಪ್ರಶ್ನೆ ಹಾಕಿದೆವು. ಅದಕ್ಕೆ ಅವರು ಕೊಟ್ಟ ಉತ್ತರ: "The death of my father would have haunted me in the rest of my life!". ಹಗ್ಗ ಕತ್ತರಿಸಿದ್ದರೆ ನಾನು ಹಾಗೂ ನನ್ನ ಪತಿ ಬದುಕಿ ಉಳಿಯಬಹುದಿತ್ತು, ನಿಜ. ಆದರೆ ನನ್ನ ಮುಂದಿನ ಬದುಕು ಖಂಡಿತಾ ಸುಖಕರವಾಗಿರುತ್ತಿರಲಿಲ್ಲ. ನನ್ನ ಕಣ್ಣೆದುರಿಗೇ ನನ್ನ ತಂದೆ ಪರ್ವತದ ಪ್ರಪಾತಕ್ಕೆ ಬಿದ್ದು ಸತ್ತ ದೃಶ್ಯ, ನನ್ನ ಇಡೀ ಜೀವಮಾನದಲ್ಲಿ ಎಂದೂ ಮರೆಯಲಾಗದ ದುಃಸ್ವಪ್ನವಾಗಿ ಕಾಡುತ್ತಿತ್ತು. ನನ್ನ ತಂದೆಯನ್ನು ಕೈಯಾರೆ ಕೊಂದ ಅಪರಾಧಿ ಪ್ರಜ್ಞೆ ನನ್ನನ್ನು ಜೀವನವಿಡೀ ಕಾಡದೆ ಬಿಡುತ್ತಿರಲಿಲ್ಲ. ಅಂತಹ ಅಪರಾಧಿ ಪ್ರಜ್ಞೆಯಿಂದ ಬಳಲುತ್ತಾ ಮಾನಸಿಕ ತೊಳಲಾಟದಲ್ಲಿ ದಿನವೂ ಸಾಯುವ ಬದಲು ಆ ಗಳಿಗೆಯಲ್ಲಿಯೇ ನಿರುಮ್ಮಳವಾಗಿ ಸಾಯುವುದು ಮೇಲಲ್ಲವೇ? ಎಂಬುದು ಶ್ರೀಮತಿ ಶೈಲಜಾರವರ ವಾದದ ಸರಣಿಯಾಗಿತ್ತು. ಅವರಿಗೆ ನಾವು ಹಾಕಿದ ಮರುಪ್ರಶ್ನೆ: "ಹಾಗಾದರೆ ನೀವು ಹಗ್ಗವನ್ನು ಕತ್ತರಿಸಬಾರದೆಂದು ಗಂಡನಿಗೆ ಹೇಳುವ ಮಾತು ತಂದೆಯನ್ನು ಕೈಯಾರೆ ಸಾಯಿಸಬಾರದೆಂಬ ಅಂತಃಕರಣಕ್ಕಿಂತ ಹೆಚ್ಚಾಗಿ, ತಂದೆಯ ಆ ಸಾವಿನಿಂದ ಮುಂದೆ ನೀವು ನಿತ್ಯ ಸಾಯುವಂತಾಗಬಾರದೆಂಬ ಸ್ವಾರ್ಥ ಪ್ರೇರಣೆಯಿಂದ ಎಂದಾಗುವುದಿಲ್ಲವೇ?" ಶ್ರೀಮತಿ ಶೈಲಜಾರವರು ತಕ್ಷಣವೇ ಏನು ಹೇಳಬೇಕೆಂದು ತಿಳಿಯದೆ ನಿರುತ್ತರರಾಗಿ ಮೌನ ಧರಿಸಿದರು. ನಮ್ಮೊಳಗೇ ನಾವು ಚಿಂತಿಸತೊಡಗಿದೆವು. ಈ ಪ್ರಶ್ನೆಗೆ ನಾವು ಕಂಡುಕೊಂಡ ಉತ್ತರ ಹೀಗಿದೆ: ಮೇಲುನೋಟಕ್ಕೆ ಶ್ರೀಮತಿ ಶೈಲಜಾ ಅವರ ನಿಲುವು ಸ್ವಾರ್ಥಪ್ರೇರಿತವಾಗಿ ಕಂಡರೂ ಅದೂ ಸಹ ಹೃದಯದ ಭಾವನೆಗಳಿಂದ ಪರಿಪ್ಲಾವಿತವಾದ ನಿಲುವೇ ಆಗಿದೆ. ಅವರಿಗೆ ಮುಂದಿನ ಬದುಕಿನಲ್ಲಿ ಸುಖವಾಗಿ ಏಕೆ ಇರಲು ಸಾಧ್ಯವಾಗುವುದಿಲ್ಲ? ತಂದೆಯ ದಾರುಣ ಸಾವು ಏಕೆ ನಿರಂತರ ಕಾಡಬೇಕು? ಬೇರೆ ಯಾರಿಗೂ ಅಂಥ ಭಾವ ಕಾಡದಿರುವಾಗ ಶೈಲಜಾ ಎಂಬ 'ಮಗಳನ್ನು' ಏಕೆ ಕಾಡಬೇಕು? ಅಪರಾಧಿ ಪ್ರಜ್ಞೆ ಏಕೆ ಅವರನ್ನು ತಲ್ಲಣಗೊಳಿಸಬೇಕು? ಉತ್ತರ ಸರಳವಿದೆ. ಈ ಮಾನಸಿಕ ತಳಮಳ, ತಲ್ಲಣಗಳ ಹಿಂದೆ ತಂದೆಯ ಮೇಲಿನ ಗಾಢ ಪ್ರೀತಿ ಇದೆ; ತಂದೆಯ ಜೊತೆಗಿನ ಭಾವನಾತ್ಮಕ ಸಂಬಂಧ ಇದೆ. ಅಂಥ ಪ್ರೀತಿ ಇಲ್ಲದಿದ್ದರೆ ಅಪರಾಧಿ ಪ್ರಜ್ಞೆ ಅವರನ್ನು ಕಾಡುತ್ತಿರಲಿಲ್ಲ. ಆ ಕಾರಣಕ್ಕಾಗಿಯೇ ಹಗ್ಗ ಕತ್ತರಿಸುವುದರಿಂದ ತಾನು ಬದುಕಿ ಉಳಿಯಬಹುದಲ್ಲಾ ಎಂಬ ಬುದ್ಧಿಯ ತರ್ಕ ಗೌಣವಾಗಿ ತಂದೆಯೊಂದಿಗೆ ಸಾವನ್ನಪ್ಪಲು ಮಗಳ ಹೃದಯ ಹಂಬಲಿಸುತ್ತದೆ. ಹೃದಯ ಗೆದ್ದು ಬುದ್ಧಿ ಸೋಲುತ್ತದೆ. ಹೃದಯದ ಭಾವನೆಗಳು ಬಲಗೊಂಡು ಬುದ್ಧಿಯ ವ್ಯಾವಹಾರಿಕ ತರ್ಕ ಕುಗ್ಗುತ್ತದೆ.

ತನಗಾಗಿ ಮಾತ್ರ ಬದುಕದೆ ಇನ್ನೊಬ್ಬರಿಗಾಗಿಯೂ ಬದುಕುವುದು ನಿಸ್ವಾರ್ಥ ಬದುಕು. ಇನ್ನೊಬ್ಬರನ್ನು ಬದುಕಿಸುವ ಯತ್ನದಲ್ಲಿ ತಾನು ಸಾಯುವುದು ನಿಃಸ್ವಾರ್ಥ, ತ್ಯಾಗ. ಅಂಥ ಪ್ರಯತ್ನವು ಮೇಲೆ ಪರ್ವತಾರೋಹಣದಲ್ಲಿ ಕಂಡುಬಂದ ತಂದೆಯದು. ತನ್ನ ತಂದೆಯ ಸಾವಿನೊಂದಿಗೆ ತಾನೂ ಸಾವಿಗೆ ಶರಣಾಗುವ ಮಗಳ ನಿರ್ಧಾರವೂ ಒಂದು ಮಹಾತ್ಯಾಗವೇ. ಅದು ತಂದೆ ಮಾಡಬಯಸಿದ ತ್ಯಾಗಕ್ಕಿಂತಲೂ ದೊಡ್ಡದು. ಏಕೆಂದರೆ ಹಗ್ಗವನ್ನು ಕತ್ತರಿಸಿದರೆ ತಾನು ತನ್ನ ಗಂಡ ಉಳಿಯುವ ಸಾಧ್ಯತೆ ಇತ್ತು. ತಂದೆಗಂತೂ ಸಾವು ನಿಶ್ಚಿತವಾಗಿತ್ತು. ಅವನಿಗೆ ಬದುಕುವ ಅವಕಾಶವೇ ಇರಲಿಲ್ಲ. ತಾನು ಸತ್ತರೂ ಪರವಾಗಿಲ್ಲ, ತನ್ನ ಮಗಳು ಅಳಿಯನಾದರೂ ಬದುಕಲಿ, ತನ್ನ ಕಾರಣಕ್ಕಾಗಿ ಸಾಯದಿರಲಿ

ಎಂಬ ತಂದೆಯ ಮನೋಧರ್ಮ ಸರಿ. ಅಂಥದ್ದರಲ್ಲಿ ಹಗ್ಗ ಕತ್ತರಿಸುವುದರಿಂದ ತಾವಿಬ್ಬರೂ ಉಳಿಯಬಹುದು ಎಂಬ ಅರಿವಿದ್ದರೂ ಬದುಕಲು ಇಷ್ಟಪಡದೆ ತಂದೆಯೊಂದಿಗೆ ಸಾವಿನಲ್ಲಿ ಒಂದಾಗುವ ಮಗಳ ನಿರ್ಧಾರದಲ್ಲಿ ತಂದೆಯ ಪ್ರೇಮಕ್ಕಿಂತಲೂ ಮಿಗಿಲಾದ ಪ್ರೇಮವನ್ನು ಮತ್ತು ಅವನ ತ್ಯಾಗಕ್ಕಿಂತಲೂ ಮಿಗಿಲಾದ ಮಹಾನ್ ತ್ಯಾಗವನ್ನು ನೋಡಬಹುದಾಗಿದೆ. ಇನ್ನು ಅಳಿಯನ ಮನಃಸ್ಥಿತಿಯನ್ನು ವಿಶ್ಲೇಷಿಸೋಣ. ತಾನು ಮತ್ತು ತನ್ನ ಹೆಂಡತಿ ಬದುಕಲು ಆಸೆಪಟ್ಟು ಹಗ್ಗವನ್ನು ಕತ್ತರಿಸಿ ಮಾವನನ್ನು ಸಾಯಲು ಬಿಟ್ಟರೆ ಸ್ವಾರ್ಥಿ ಎನಿಸಿಕೊಳ್ಳುತ್ತಾನೆ. ಮಾವನನ್ನು ಸಾಯಿಸಿ ಹೆಂಡತಿಯೊಂದಿಗೆ ಉಳಿಯಲೂ ಆರ, ಮಾವನನ್ನು ಸಾಯಿಸದೆ ಹೆಂಡತಿಯನ್ನು ಉಳಿಸಿಕೊಳ್ಳಲೂ ಆರ. ಇಂತಹ ದ್ವಂದ್ವ ಸ್ಥಿತಿಯಲ್ಲಿ ಇದೆಲ್ಲವನ್ನೂ ಮೀರಿಸುವಂತೆ ಅವನು ತನ್ನ ಕಾಲಿನ ಕೆಳಭಾಗದ ಹಗ್ಗವನ್ನು ಕತ್ತರಿಸದೆ, ತನ್ನ ಹೆಂಡತಿಯ ಜೀವವನ್ನು ಉಳಿಸುವ ಸಲುವಾಗಿ ತನ್ನ ಕೈಗಳ ಮೇಲ್ಭಾಗದಲ್ಲಿರುವ ಹಗ್ಗವನ್ನೇ ಕತ್ತರಿಸಿ ತಾನೂ ಸಾವಿನಲ್ಲಿ ಮಾವನನ್ನು ಹಿಂಬಾಲಿಸಿದರೆ ಆ ತಂದೆ-ಮಗಳಿಗಿಂತಲೂ ಮಹಾನ್ ತ್ಯಾಗ ಅವನದಾದೀತು. ಅಂಥವರು ಪ್ರಪಂಚದಲ್ಲಿ ಅಮರರಾಗುತ್ತಾರೆ. 'ತ್ಯಾಗೇನೈಕೇನ ಅಮೃತತ್ವಮಾನಶುಃ'. ಅಮರತ್ವ ಸಿದ್ಧಿಸುವುದು ಸಂಪತ್ತಿನಿಂದ ಅಲ್ಲ, ಸ್ವಾರ್ಥಪರತೆಯಿಂದ ಅಲ್ಲವೇ ಅಲ್ಲ, ಅದು ಸಾಧ್ಯವಾಗುವುದು ತ್ಯಾಗಭಾವನೆಯಿಂದ ಮಾತ್ರ!

ಜೀವಿಗೆ ಭಾವನಾತ್ಮಕ ಸಂಬಂಧ ಒಂದು ಕಡೆ, ಶರೀರಕ್ಕೆ ಪ್ರಕೃತಿ ಸಹಜವಾದ ಬದುಕಿನ ಹಂಬಲ ಮತ್ತೊಂದು ಕಡೆ. ತಾನು ಹೇಗಾದರೂ ಸರಿ ಬದುಕಿ ಉಳಿಯಬೇಕೆನ್ನುವುದು ಪ್ರಕೃತಿಯ ಸಹಜ ಗುಣ. ಇದು ಯಾವ ಜೀವಜಂತುವನ್ನೂ ಬಿಟ್ಟಿಲ್ಲ. ಉದಾಹರಣೆಗೆ ನೀವು ಮಲಗುವ ಮಂಚ, ಹಾಸಿಗೆ, ಅವುಗಳ ಸಂದುಗೊಂದುಗಳಲ್ಲಿರುವ ತಿಗಣೆಗಳು. ಬೇಸಿಗೆಯ ಕಾಲ ಬಂತೆಂದರೆ ಹಳ್ಳಿಗಳಲ್ಲಿ ತಿಗಣೆ ಕೊಲ್ಲಲು ಹಾಸಿಗೆಗಳನ್ನು ಬಿಸಿಲಿಗೆ ಹರಡುತ್ತಾರೆ; ಮಂಚದ ಕೈಕಾಲುಗಳನ್ನು ಬಿಡಿಸಿ ಬಿಸಿಲಿಗೆ ಹಾಕುತ್ತಾರೆ. ಪಾಪ, ತಿಗಣೆಗಳು ಬದುಕಿ ಉಳಿಯಲು, ತಮ್ಮನ್ನು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಮಂಚ-ಹಾಸಿಗೆಯ ಬೇರೊಂದು ಸಂದುಗೊಂದುಗಳನ್ನು ಹುಡುಕಿಕೊಂಡು ಒಳಸೇರುತ್ತವೆ. ಹೀಗೆ ಹೇಗಾದರೂ ಮಾಡಿ ಬದುಕಬೇಕೆಂಬ ಒತ್ತಾಸೆ ಒಂದು ಕ್ಷುದ್ರ ಜಂತು ತಿಗಣೆಗೂ ಇರುವಾಗ ಮನುಷ್ಯನಿಗಿದ್ದರೆ ತಪ್ಪೇನು? ತಪ್ಪೇನೂ ಇಲ್ಲ. ಆದರೆ ತಿಗಣೆಯಂತೆ ಮನುಷ್ಯ ಇನ್ನೊಬ್ಬರ ರಕ್ತವನ್ನು ಹೀರಿ ಬದುಕುವುದಾದರೆ ಅದನ್ನೊಂದು ಬದುಕು ಎನ್ನಲು ಸಾಧ್ಯವಿಲ್ಲ. ತಾನೂ ಬದುಕಿ ಇತರರನ್ನೂ ಬದುಕಿಸುವುದು ಮಾನವೀಯತೆ. ತಾನು ಸತ್ತು ಇತರರನ್ನು ಬದುಕಿಸುವುದು ಮಹಾತ್ಯಾಗ. ತಾನೂ ಸತ್ತು ಇತರರನ್ನೂ ಸಾಯಿಸುವುದು ಮಹಾಕ್ರೌರ್ಯ. ಇಂದು ಪತ್ರಿಕೆಗಳಲ್ಲಿ, ಆಕಾಶವಾಣಿ-ದೂರದರ್ಶನಗಳಲ್ಲಿ ದಿನನಿತ್ಯ ವರದಿಯಾಗುವಂತೆ ಪ್ರಪಂಚದ ಉದ್ದಗಲಕ್ಕೂ ನಡೆಯುತ್ತಿರುವುದು ಇಂತಹ ರಕ್ತದಾಹದ ಪಾಶವೀ ಕೃತ್ಯ. ಸಾವಿಗೆ ಹೆದರದ ಈ ಭಯೋತ್ಪಾದಕರು ಹುತಾತ್ಮರಲ್ಲ; ಧರ್ಮಾಂಧರು, ಕೊಲೆಪಾತಕಿಗಳು. ತಾವೂ ಬದುಕದೆ ಬದುಕುವವರನ್ನೂ ಬದುಕಲು ಬಿಡದ ನರರಾಕ್ಷಸರು.

3.12.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑